# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ ಎ<br>Part – IV A | ಬೆಂಗಳೂರು, ಮಂಗಳವಾರ, ೧೬, ನವೆಂಬರ್, ೨೦೨೧(ಕಾರ್ತಿಕ, ೨೫, ಶಕವರ್ಷ, ೧೯೪೩)<br>BENGALURU, TUESDAY, 16, NOVEMBER, 2021(KARTHIKA, 25, SHAKAVARSHA, 1943) | ನಂ. ೮೬೨<br>No. 862 |
|---|---|---|


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 46 SHASANA 2021, BENGALURU, DATED:16.11.2021**

The Karnataka Municipal corporations and Certain Other law (Amendment) Ordinance, 2021 ಇದಕ್ಕೆ 2021ರ ನವೆಂಬರ್ ತಿಂಗಳ 15ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು **2021ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 08** ಎಂಬುದಾಗಿ ದಿನಾಂಕ: 16.11.2021ರ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆಯಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## KARNATAKA ORDINANCE NO. 08 OF 2021

## THE KARNATAKA MUNICIPAL CORPORATIONS AND CERTAIN OTHER LAW (AMENDMENT) ORDINANCE, 2021

(Promulgated by the Governor of Karnataka in the seventy second year of the Republic of India and first published in the Karnataka Gazette Extra-ordinary on the 16th day of November, 2021)

An Ordinance further to amend the Karnataka Municipal Corporations Act, 1976 and the Bruhat Bengaluru Mahanagara Palike Act, 2020.

Whereas the Karnataka Legislative Assembly and the Karnataka Legislative Council are not in session and the Governor of Karnataka is satisfied that the circumstances exist which render it necessary for him to take immediate action to promulgate the Ordinance for the purposes hereinafter appearing;

Now, therefore, in exercise of the powers conferred by clause (1) of Article 213 of the Constitution of India, the Governor of Karnataka is pleased to promulgate the following Ordinance, namely:-

**1. Short title and commencement.-** (1) This Ordinance may be called the Karnataka Municipal Corporations and Certain Other Law (Amendment) Ordinance, 2021.

(2) It shall come into force at once.

**2. Amendment of the Karnataka Act 14 of 1977.-** In the Karnataka Municipal Corporations Act, 1976 (Karnataka Act 14 of 1977), after section 299, the following shall be inserted, with effect from 4th day of September 2015, namely:-

**"299A. Levy of imposts, restrictions and conditions in respect of Bruhat Bengaluru Mahanagara Palike.-** (1) The Commissioner may grant such permission to execute the work together with a site plan of the land, ground plan, elevations and section of the building subject to such restrictions and conditions, as may be specified in the zoning regulations or building bye-laws or he may refuse to grant such license subject to the conditions specified in section 303.

(2) The Commissioner may for approving or sanctioning the plan or grant of commencement certificate or completion certificate, charge and levy the following fee at such rates based on the guidance value fixed by the Department of Stamps and Registration under the provisions of the Karnataka Stamp Act, 1957, namely:-

(a) fee for issuance of license;

(b) fee for security of the building for which license granted;

(c) fee for maintenance of public roads or storing of construction materials in public places during construction viz, ground rent;

(d) security fee, ensuring that the construction is in accordance with plan sanctioned;

(e) fee for commencement certificate;

(f) fee for occupancy certificate;

(g) penalty imposed at the time of issuance of occupancy certificate for not obtaining commencement certificate at the commencement of the construction;

(h) penalty for regularization up to 5% of violation or deviation in the construction with respect to sanctioned plan or zonal regulation limit; and

(i) such other fee as specified by the Government from time to time.

**299B. Power of the State Government to exempt or reduce fee levied or charged or assessed in respect of the Bruhat Bengaluru Mahanagara Palike.-** (1) The State Government may, if in its opinion it is necessary in the public interest so to do, by notification and subject to such restrictions and conditions and for such period, as may be specified in the notification, exempt or reduce the fee payable under this Ordinance, for any Board or Corporation or Organization owned or controlled by the Central Government or the State Government.

(2) The State Government may, by notification cancel or vary any notification issued under sub-section (1).

(3) Where any restriction or condition specified under sub-section (1) is contravened or is not observed by a person or a declaration furnished under sub-section (1) is found to be wrong, then such person shall be liable to pay by way of penalty, an amount equal to twice the difference between the fee payable at the rate specified by or under the Act and the fee paid at the rate specified under the notification on consideration in respect of which such contravention or non-observance has taken place or a wrong declaration is furnished.

(4) For removal of doubts, it is hereby declared that the levy of imposts, assessment and collection of fee or penalty under the Act as amended by the Karnataka Municipal Corporations and Certain Other Law (Amendment) Ordinance, 2021 or any rules,

notification, order, letter or guidelines shall be deemed to have always been levied and collected as levy of imposts.

(5) No penal proceeding shall be commended against any person for any contravention of the provisions of Chapter-XV of the Act that may arise as a consequence of the retrospective amendment made by the Karnataka Municipal Corporations and Certain Other Law (Amendment) Ordinance, 2021.

**299C. Validation of levy and collection of fee.-** Notwithstanding anything contained in any judgment, decree or order of any Court, Tribunal or other authority to the contrary levy, assessment or collection of any amount as fee or penalty for sanctioning plan or commencement certificate or occupancy certificate made or purporting to have been made under section 299A and any action or thing taken or done, (including any notices or orders issued or assessment made) and all proceedings held and any levy and collection of fee or amount purported to have been collected by way of fee or penalty in relation to such levy, assessment or collection under the provisions of the Karnataka Municipal Corporations Act, 1976 (Karnataka Act 14 of 1977) or any rules, notifications, order, guidelines or letters before the commencement of this Ordinance shall be and shall be deemed to be valid and effective for all purposes as if such levy, assessment or collection or action or thing had been made, taken or done under the Karnataka Municipal Corporations Act, 1976 (Karnataka Act 14 of 1977) as amended by the Karnataka Municipal Corporations and Certain Other Law (Amendment) Ordinance, 2021 and accordingly:-

(a) all acts, proceedings or things done or any action taken by the Government or the Bruhat Bengaluru Mahanagara Palike officers as the case may be in connection with the levy, assessment or collection of any amount as fee for all purposes be deemed to be and to have always been made, done or taken in accordance with law;

(b) no suit or other proceeding shall be maintained or continued in any Court or Tribunal or before any authority for the refund of any such fee; and

(c) no Court shall enforce any decree or order directing the refund of any such fee."

**3. Amendment of the Karnataka Act 53 of 2020.-** In the Bruhat Bengaluru Mahanagara Palike Act, 2020 (Karnataka Act 53 of 2020), after section 240, the following new sections shall be inserted, with effect from 11th day of January 2021, namely:-

"**240A. Levy of imposts, restriction and condition.-** (1) The Chief Commissioner may grant such permission to execute the work together with a site plan of the land, ground plan, elevations and sections of the building subject to such restrictions and conditions, as may be specified in the bye-laws or he may refuse to grant such licence, subject to the conditions specified in section 244.

(2) The Chief Commissioner while fixing the rates for levy of fee or penalty shall consider all the costs related to the issue and execution of the approval as he may deem fit.

(3) The Chief Commissioner may for approving or sanctioning the plan or grant of commencement certificate or completion certificate,-

(A) charge and levy the following fee at such rates based on the guidance value fixed by the Department of Stamps and Registration under the provisions of the Karnataka Stamp Act, 1957, namely:-

(a) fee for issuance of license;

(b) fee for maintenance of public roads or storing of construction materials in public places during construction viz, ground rent;

(c) security fee ensuring that the construction is in accordance with plan sanctioned;

(d) fee for commencement certificate;

(e) fee for completion certificate; and

(f) such other fee as specified by the Government from time to time.

(B) charge and levy any other deposit or fee or cess specified under any other law in force.

**240B. Power of the State Government to exempt or reduce fee levied or charged or assessed.-** (1) The State Government may, if in its opinion, it is necessary in the public interest so to do, by notification and subject to such restrictions and conditions and for such period as may be specified in the notification, exempt or reduce either prospectively or retrospectively, the fee payable under this Ordinance for any Board or Corporation or Organization owned or controlled by the Central Government or the State Government.

(2) The State Government may, by notification cancel or vary any notification issued under sub-section (1).

(3) Where any restriction or condition specified under sub-section (1) is contravened or is not observed by a person or a declaration furnished under sub-section (1) is found to be wrong then such person shall be liable to pay by way of penalty an amount equal to twice the difference between the fee payable at the rates specified by or under the Act and the fee paid at the rates specified under the notification on the consideration in respect of which such contravention or non-observance has taken place or a wrong declaration is furnished:

Provided that, before taking action under sub-section (1), the person shall be given a reasonable opportunity of being heard.

(4) For the removal of doubts it is hereby declared that, the levy of imposts, assessment and collection of fee or penalty under the Act as amended by the Karnataka Municipal Corporations and Certain Other Law (Amendment) Ordinance, 2021 or any rules, notification, order, letter or guidelines shall be deemed to have always been levied and collected as levy of imposts.

**240C. Validation of levy and collection of fees.-** Notwithstanding anything contained in any judgment, decree or order of any Court, Tribunal or other authority to the contrary, levy, assessment and collection of any amount as fee or penalty for sanctioning Building plan, Commencement Certificate, made or purporting to have been made under section 240A, section 246 and any action initiated or done, including any notices or orders issued or assessment made and all proceedings held and any levy and collection of fee or amount purported to have been collected by way of fee or penalty in relation to such levy, assessment or collection, under the provisions of the Bruhat Bengaluru Mahanagara Palike Act, 2020 (Karnataka Act 53 of 2020) or any rules, notification, order, letter or guidelines, before the commencement of the Karnataka Municipal Corporations and Certain Other Law (Amendment) Ordinance, 2021 shall be and shall be deemed to be valid and effective for all purposes, as if such levy, assessment or collection or action had been made, taken or done under the Bruhat Bengaluru

Mahanagara Palike Act, 2020 (Karnataka Act 53 of 2020) as amended by the Karnataka Municipal Corporations and Certain Other Law (Amendment) Ordinance, 2021 and accordingly,-

(a) all acts, proceedings or things done or any action taken by the Government or the Bruhat Bengaluru Mahanagara Palike officers as the case may be in connection with the levy, assessment or collection of any amount as fee for all purposes be deemed to be and to have always been made, done or taken in accordance with law;

(b) no suit or other proceeding shall be maintained or continued in any Court or Tribunal or before any authority for the refund of any such fee; and

(c) no Court shall enforce any decree or order directing the refund of any such fee."

**THAAWARCHAND GEHLOT**
**Governor of Karnataka**

By Order and in the name of
**the Governor of Karnataka,**

**G. SRIDHAR**
Secretary to Government
Department of Parliamentary Affairs
and Legislation

## <u>ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ</u>

## <u>ಅಧಿಸೂಚನೆ</u>

**<u>ಸಂಖ್ಯೆ: ಸಂವ್ಯಶಾಇ 46 ಶಾಸನ 2021, ಬೆಂಗಳೂರು, ದಿನಾಂಕ: 16.11.2021</u>**

The Karnataka Official Language Act, 1963 (Karnataka Act 26 of 1963) ರ ಪ್ರಕರಣ 5-ಎ ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ The Karnataka Municipal Corporations and Certain Other Law (Amendment) Ordinance, 2021 (Karnataka Ordinance 08 of 2021)ನ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ದಿನಾಂಕ: 16.11.2021ರ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆಯಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## 2021 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 08
## ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧ್ಯಾದೇಶ, 2021

(ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2021ರ ನವೆಂಬರ್ 16ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಅಧ್ಯಾದೇಶ.

ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸಲು, ಶೀಘ್ರ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಆದ್ದರಿಂದ ಈಗ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧ್ಯಾದೇಶವನ್ನು, ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧ್ಯಾದೇಶ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14ರ ತಿದ್ದುಪಡಿ.-** ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರಲ್ಲಿ (1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14), 299ನೇ ಪ್ರಕರಣದ ತರುವಾಯ, 4ನೇ ಸೆಪ್ಟಂಬರ್, 2015ರಿಂದ ಜಾರಿಗೆ ಬರುವಂತೆ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**299ಎ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಬಂಧದಲ್ಲಿ ಕರಗಳು, ನಿರ್ಬಂಧಗಳು ಮತ್ತು ಷರತ್ತುಗಳನ್ನು ವಿಧಿಸುವುದು.-** (1) ಆಯುಕ್ತನು, ವಲಯ ರಚನೆ ವಿನಿಯಮಗಳಲ್ಲಿ ಅಥವಾ ಕಟ್ಟಡ ಉಪ-ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಭೂಮಿಯ ನಿವೇಶನ ನಕ್ಷೆ, ಭೂ ನಕ್ಷೆ, ಕಟ್ಟಡದ ಎತ್ತರಿಸುವಿಕೆಗಳು ಮತ್ತು ವಿಭಾಗದೊಂದಿಗೆ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಅಂಥ ಅನುಮತಿಯನ್ನು ನೀಡಬಹುದು ಅಥವಾ ಆತನು, 303ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು ಅಂಥ ಲೈಸೆನ್ಸನ್ನು ನೀಡಲು ನಿರಾಕರಿಸಬಹುದು.

(2) ಆಯುಕ್ತನು, ನಕ್ಷೆಯನ್ನು ಅನುಮೋದಿಸಲು ಅಥವಾ ಮಂಜೂರು ಮಾಡಲು ಅಥವಾ ಪ್ರಾರಂಭ ಪ್ರಮಾಣಪತ್ರವನ್ನು ಅಥವಾ ಪೂರ್ಣಗೊಳಿಸಿದ ಪ್ರಮಾಣಪತ್ರವನ್ನು ನೀಡಲು, ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ ಉಪಬಂಧಗಳ ಅಡಿಯಲ್ಲಿ, ಸ್ಟ್ಯಾಂಪುಗಳು ಮತ್ತು ನೋಂದಣಿ ಇಲಾಖೆಯು ನಿಗದಿಪಡಿಸಿದ ಮಾರ್ಗಸೂಚಿ ಮೌಲ್ಯವನ್ನಾಧರಿಸಿದಂಥ ದರಗಳಲ್ಲಿ ಈ ಮುಂದಿನ ಶುಲ್ಕವನ್ನು ವಿಧಿಸಬಹುದು ಮತ್ತು ವಸೂಲು ಮಾಡಬಹುದು, ಎಂದರೆ:-

(ಎ) ಲೈಸೆನ್ಸ್ ನೀಡುವುದಕ್ಕಾಗಿ ಶುಲ್ಕ;

(ಬಿ) ಲೈಸೆನ್ಸ್ ನೀಡಲಾಗಿರುವ ಕಟ್ಟಡದ ಸುರಕ್ಷತೆಗಾಗಿ ಶುಲ್ಕ;

(ಸಿ) ನಿರ್ಮಾಣ ಅವಧಿಯಲ್ಲಿ ಸಾರ್ವಜನಿಕ ರಸ್ತೆಗಳ ನಿರ್ವಹಣೆಗಾಗಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣ ಸಾಮಗ್ರಿಗಳನ್ನು ಸಂಗ್ರಹಿಸುವುದಕ್ಕಾಗಿ ಶುಲ್ಕ, ಎಂದರೆ, ನೆಲ ಬಾಡಿಗೆ;

(ಡಿ) ಮಂಜೂರಾದ ನಕ್ಷೆಗನುಸಾರವಾಗಿ ನಿರ್ಮಾಣ ಕೈಗೊಳ್ಳಲಾಗಿದೆಯೆ ಎಂಬುದನ್ನು ಖಚಿತಪಡಿಸಲು ಭದ್ರತಾ ಶುಲ್ಕ;

(ಇ) ಪ್ರಾರಂಭ ಪ್ರಮಾಣಪತ್ರಕ್ಕಾಗಿ ಶುಲ್ಕ;

(ಎಫ್) ಅಧಿಭೋಗ ಪ್ರಮಾಣಪತ್ರಕ್ಕಾಗಿ ಶುಲ್ಕ;

(ಜಿ) ನಿರ್ಮಾಣ ಕಾಮಗಾರಿಯ ಆರಂಭದಲ್ಲಿ ಪ್ರಾರಂಭ ಪ್ರಮಾಣಪತ್ರ ಪಡೆಯದಿರುವುದಕ್ಕಾಗಿ ಅಧಿಭೋಗ ಪ್ರಮಾಣಪತ್ರ ನೀಡಿಕೆಯ ಸಮಯದಲ್ಲಿ ವಿಧಿಸಿದ ದಂಡ;

(ಹೆಚ್) ಮಂಜೂರಾದ ನಕ್ಷೆಯ ಅಥವಾ ವಲಯ ನಿಯಂತ್ರಣ ಮಿತಿಯ ಸಂಬಂಧದಲ್ಲಿ ನಿರ್ಮಾಣದಲ್ಲಿನ ಉಲ್ಲಂಘನೆಯ ಅಥವಾ ಬದಲಾವಣೆಯನ್ನು ಕ್ರಮಬದ್ಧಗೊಳಿಸುವುದಕ್ಕಾಗಿ ಶೇಕಡ 5ರಷ್ಟರವರೆಗೆ ದಂಡ; ಮತ್ತು

(ಐ) ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂಥ ಇತರ ಶುಲ್ಕ.

**299ಬಿ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಬಂಧದಲ್ಲಿ ಶುಲ್ಕವನ್ನು ವಸೂಲು ಮಾಡುವುದು ಅಥವಾ ವಿಧಿಸುವುದು ಅಥವಾ ನಿರ್ಧರಿಸುವುದರಿಂದ ವಿನಾಯಿತಿಸಲು ಅಥವಾ ಕಡಿಮೆಗೊಳಿಸಲು ರಾಜ್ಯ ಸರ್ಕಾರದ ಅಧಿಕಾರ.-** (1)ರಾಜ್ಯ ಸರ್ಕಾರವು, ಅದರ ಅಭಿಪ್ರಾಯದಲ್ಲಿ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳಿಗೆ ಹಾಗೂ ಷರತ್ತುಗಳಿಗೆ ಒಳಪಟ್ಟು ಮತ್ತು ಅಂಥ ಅವಧಿಗಾಗಿ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಮಾಲಿಕತ್ವ ಹೊಂದಿದ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಮಂಡಳಿ ಅಥವಾ ನಿಗಮ ಅಥವಾ ಸಂಸ್ಥೆಗೆ, ಈ ಅಧ್ಯಾದೇಶದ ಅಡಿಯಲ್ಲಿ ಸಂದಾಯ ಮಾಡಬಹುದಾದ ಶುಲ್ಕವನ್ನು ವಿನಾಯಿತಿಸುವುದು ಅಥವಾ ಕಡಿಮೆಗೊಳಿಸುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ಅವಶ್ಯಕವಾಗಿದ್ದರೆ, ಅಧಿಸೂಚನೆಯ ಮೂಲಕ ಅದು ಹಾಗೆ ಮಾಡಬಹುದು.

(2) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ಅಧಿಸೂಚನೆಯನ್ನು ರದ್ದುಗೊಳಿಸಬಹುದು ಅಥವಾ ಬದಲಾಯಿಸಬಹುದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಿರ್ಬಂಧವನ್ನು ಅಥವಾ ಷರತ್ತನ್ನು ಒಬ್ಬ ವ್ಯಕ್ತಿಯು ಉಲ್ಲಂಘಿಸಿದಲ್ಲಿ ಅಥವಾ ಪಾಲಿಸದೇ ಇದ್ದಲ್ಲಿ ಅಥವಾ (1)ನೇ ಉಪ-ಪ್ರಕರಣದ ಅಡಿಯಲ್ಲಿ ಒದಗಿಸಬೇಕಾದ ಘೋಷಣೆಯು ತಪ್ಪಾಗಿದೆ ಎಂದು ಕಂಡುಬಂದಲ್ಲಿ, ಆಗ ಅಂಥ ವ್ಯಕ್ತಿಯು, ಅಂಥ ಉಲ್ಲಂಘನೆಯಾಗಿರುವ ಅಥವಾ ಪಾಲನೆಯಾಗದಿರುವ ಅಥವಾ ತಪ್ಪು ಘೋಷಣೆ ಒದಗಿಸಿರುವುದನ್ನು ಪರಿಗಣಿಸಿದ ಮೇಲೆ, ಅಧಿನಿಯಮ ಅಥವಾ ಅದರಡಿ ನಿರ್ದಿಷ್ಟಪಡಿಸಿದ ದರದಲ್ಲಿ ಸಂದಾಯ ಮಾಡಬಹುದಾದ ಶುಲ್ಕ ಮತ್ತು ಅಧಿಸೂಚನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಸಂದಾಯ ಮಾಡಿದ ಶುಲ್ಕಗಳ ನಡುವಿನ ವ್ಯತ್ಯಾಸದ ಮೊತ್ತದ ಎರಡರಷ್ಟು ಮೊತ್ತಕ್ಕೆ ಸಮನಾದ ಮೊತ್ತವನ್ನು ದಂಡದ ರೂಪದಲ್ಲಿ ಸಂದಾಯ ಮಾಡಲು ಹೊಣೆಗಾರನಾಗತಕ್ಕದ್ದು.

(4) ಸಂಶಯಗಳ ನಿವಾರಣೆಗಾಗಿ, ಅಧಿನಿಯಮದ ಅಡಿಯಲ್ಲಿ ಕರಗಳನ್ನು ವಿಧಿಸುವುದನ್ನು, ಶುಲ್ಕ ಅಥವಾ ದಂಡದ ನಿರ್ಧರಣೆ ಮತ್ತು ಸಂಗ್ರಹಣೆಯನ್ನು, ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧ್ಯಾದೇಶ, 2021ರ ಅಥವಾ ಯಾವುವೇ ನಿಯಮಗಳು, ಅಧಿಸೂಚನೆ, ಆದೇಶ, ಪತ್ರ ಅಥವಾ ಮಾರ್ಗಸೂಚಿಗಳ ಮೂಲಕ ತಿದ್ದುಪಡಿಯಾದಂತೆ ಯಾವಾಗಲೂ ಕರಗಳನ್ನು ವಿಧಿಸಲಾಗಿದೆ, ವಸೂಲು ಮಾಡಲಾಗಿದೆ ಮತ್ತು ಸಂಗ್ರಹಿಸಲಾಗಿದೆ ಎಂಬುದಾಗಿ ಭಾವಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

(5) ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧ್ಯಾದೇಶ, 2021ರ ಮೂಲಕ ಮಾಡಿದ ಪೂರ್ವಾನ್ವಯ ತಿದ್ದುಪಡಿಯ ಪರಿಣಾಮವಾಗಿ ಉದ್ಭವಿಸಬಹುದಾದ ಅಧಿನಿಯಮದ XVನೇ ಅಧ್ಯಾಯದ ಉಪಬಂಧಗಳ ಯಾವುದೇ ಉಲ್ಲಂಘನೆಗಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಂಡನಾ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**299ಸಿ. ಶುಲ್ಕ ವಿಧಿಸುವಿಕೆ ಮತ್ತು ಸಂಗ್ರಹಣೆಯನ್ನು ಸಿಂಧುಗೊಳಿಸುವುದು.-** 299ಎ ಪ್ರಕರಣದ ಅಡಿಯಲ್ಲಿ ನೀಡಲಾದ ಅಥವಾ ನೀಡಬೇಕೆಂದು ತಾತ್ಪರ್ಯವಾದ ನಕ್ಷೆ ಅಥವಾ ಪ್ರಾರಂಭ ಪ್ರಮಾಣಪತ್ರ ಅಥವಾ ಅಧಿಭೋಗ ಪ್ರಮಾಣಪತ್ರದ ಮಂಜೂರಾತಿಗಾಗಿ ಶುಲ್ಕವಾಗಿ ಅಥವಾ ದಂಡವಾಗಿ ಯಾವುದೇ ಮೊತ್ತದ ವಸೂಲಾತಿಗೆ, ನಿರ್ಧರಣೆಗೆ ಅಥವಾ ಸಂಗ್ರಹಣೆಗೆ

ವಿರುದ್ಧವಾಗಿ, ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಹಾಗೂ ಕೈಗೊಂಡ ಅಥವಾ ಮಾಡಿದ ಯಾವುದೇ ಕ್ರಮ ಅಥವಾ ವಿಷಯದಲ್ಲಿ (ನೀಡಿದ ಯಾವುವೇ ನೋಟೀಸುಗಳನ್ನು ಅಥವಾ ಆದೇಶಗಳನ್ನು ಅಥವಾ ಮಾಡಿದ ಮೌಲ್ಯನಿರ್ಧರಣೆಯನ್ನು ಒಳಗೊಂಡು) ಹಾಗೂ ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರಲ್ಲಿ (1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಅಥವಾ ಈ ಅಧ್ಯಾದೇಶದ ಪ್ರಾರಂಭಕ್ಕೆ ಮೊದಲು ಯಾವುವೇ ನಿಯಮಗಳಲ್ಲಿ, ಅಧಿಸೂಚನೆಗಳಲ್ಲಿ, ಆದೇಶಗಳಲ್ಲಿ, ಮಾರ್ಗಸೂಚಿಗಳಲ್ಲಿ ಅಥವಾ ಪತ್ರಗಳಲ್ಲಿ ಏನೇ ಇದ್ದರೂ, ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧ್ಯಾದೇಶ, 2021ರ ಮೂಲಕ ತಿದ್ದುಪಡಿಯಾದಂತೆ ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಅಡಿಯಲ್ಲಿ ಮಾಡಿದ, ತೆಗೆದುಕೊಂಡ ಅಥವಾ ಕೈಗೊಂಡ ಅಂಥ ವಸೂಲಾತಿ, ಮೌಲ್ಯನಿರ್ಧರಣೆ ಅಥವಾ ಸಂಗ್ರಹಣೆ ಅಥವಾ ಕ್ರಮ ಅಥವಾ ವಿಷಯವಾಗಿರುವುದೆಂದು, ಆ ಎಲ್ಲಾ ಉದ್ದೇಶಗಳಿಗಾಗಿ ಸಿಂಧುವಾಗಿರತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು ಹಾಗೂ ಸಿಂಧುವಾಗಿದೆ ಮತ್ತು ಪರಿಣಾಮಕಾರಿಯಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ:-

(ಎ) ಸರ್ಕಾರವು ಅಥವಾ ಸಂದರ್ಭಾನುಸಾರವಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು, ಎಲ್ಲಾ ಉದ್ದೇಶಗಳಿಗಾಗಿ ಶುಲ್ಕವಾಗಿ ಯಾವುದೇ ಮೊತ್ತದ ವಸೂಲಾತಿ, ನಿರ್ಧರಣೆ ಅಥವಾ ಸಂಗ್ರಹಣೆ ಸಂಬಂಧದಲ್ಲಿ ಕೈಗೊಂಡ ಎಲ್ಲಾ ಕ್ರಮಗಳನ್ನು, ವ್ಯವಹರಣೆಗಳನ್ನು ಅಥವಾ ವಿಷಯಗಳನ್ನು ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು, ಯಾವಾಗಲೂ ಕಾನೂನಿಗನುಸಾರವಾಗಿ ಮಾಡಲಾಗಿದೆ, ಕೈಗೊಳ್ಳಲಾಗಿದೆ ಅಥವಾ ತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

(ಬಿ) ಅಂಥ ಯಾವುದೇ ಶುಲ್ಕದ ಮರುಸಂದಾಯಕ್ಕಾಗಿ ಯಾವುದೇ ನ್ಯಾಯಾಲಯದಲ್ಲಿ ಅಥವಾ ನ್ಯಾಯಾಧಿಕರಣದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು, ಹೂಡತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ; ಮತ್ತು

(ಸಿ) ಯಾವುದೇ ನ್ಯಾಯಾಲಯವು, ಯಾವುದೇ ಅಂಥ ಶುಲ್ಕದ ಮರುಸಂದಾಯವನ್ನು ನಿರ್ದೇಶಿಸಿ ಯಾವುದೇ ಡಿಕ್ರಿಯನ್ನು ಅಥವಾ ಆದೇಶವನ್ನು ಜಾರಿಗೊಳಿಸತಕ್ಕದಲ್ಲ."

**3. 2020ರ ಕರ್ನಾಟಕ ಅಧಿನಿಯಮ ಸಂಖ್ಯೆ 53ರ ತಿದ್ದುಪಡಿ.-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020ರಲ್ಲಿ (2020ರ ಕರ್ನಾಟಕ ಅಧಿನಿಯಮ ಸಂಖ್ಯೆ 53), 240ನೇ ಪ್ರಕರಣದ ತರುವಾಯ, ಈ ಮುಂದಿನ ಹೊಸ ಪ್ರಕರಣಗಳನ್ನು, 11ನೇ ಜನವರಿ, 2021ರಿಂದ ಜಾರಿಗೆ ಬರುವಂತೆ ಸೇರಿಸತಕ್ಕದ್ದು, ಎಂದರೆ:-

"**240ಎ. ಕರಗಳ ವಿಧಿಸುವಿಕೆ, ನಿರ್ಬಂಧ ಮತ್ತು ಷರತ್ತು.-** (1) ಮುಖ್ಯ ಆಯುಕ್ತನು, ಉಪ-ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಅಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಭೂಮಿಯ ನಿವೇಶನ ನಕ್ಷೆ, ಭೂ ನಕ್ಷೆ, ಕಟ್ಟಡದ ಎತ್ತರಿಸುವಿಕೆಗಳು ಮತ್ತು ವಿಭಾಗಗಳೊಂದಿಗೆ ಕಾಮಗಾರಿಯನ್ನು ಕಾರ್ಯಗತಗೊಳಿಸುವಂಥ ಅನುಮತಿಯನ್ನು ಮಂಜೂರು ಮಾಡಬಹುದು ಅಥವಾ 244ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು, ಅಂಥ ಲೈಸೆನ್ಸನ್ನು ಮಂಜೂರು ಮಾಡಲು ಆತನು ನಿರಾಕರಿಸಬಹುದು.

(2) ಮುಖ್ಯ ಆಯುಕ್ತನು, ಶುಲ್ಕ ಅಥವಾ ದಂಡ ವಿಧಿಸುವಿಕೆಗಾಗಿ ದರಗಳನ್ನು ನಿಗದಿಪಡಿಸುವಾಗ, ತಾನು ಯುಕ್ತವೆಂದು ಭಾವಿಸಬಹುದಾದಂತೆ, ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದ ಎಲ್ಲಾ ವೆಚ್ಚಗಳನ್ನು ಮತ್ತು ಅನುಮೋದನೆಯ ನೀಡಿಕೆಯನ್ನು ಪರಿಗಣಿಸತಕ್ಕದ್ದು.

(3) ಮುಖ್ಯ ಆಯುಕ್ತನು, ನಕ್ಷೆಯನ್ನು ಅನುಮೋದಿಸುವುದಕ್ಕಾಗಿ ಅಥವಾ ಮಂಜೂರು ಮಾಡುವುದಕ್ಕಾಗಿ ಅಥವಾ ಪ್ರಾರಂಭ ಪ್ರಮಾಣಪತ್ರ ಅಥವಾ ಪೂರ್ಣಗೊಳಿಸಿದ ಪ್ರಮಾಣಪತ್ರ ನೀಡುವುದಕ್ಕಾಗಿ,-

**(ಎ)** ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ ಉಪಬಂಧಗಳ ಅಡಿಯಲ್ಲಿ ಸ್ಟಾಂಪು ಮತ್ತು ನೋಂದಣಿ ಇಲಾಖೆಯು ನಿಗದಿಪಡಿಸಿದ ಮಾರ್ಗಸೂಚಿ ಮೌಲ್ಯವನ್ನಾಧರಿಸಿದಂಥ ದರಗಳಲ್ಲಿ ಈ ಮುಂದಿನ ಶುಲ್ಕವನ್ನು ವಿಧಿಸಬಹುದು ಮತ್ತು ವಸೂಲು ಮಾಡಬಹುದು, ಎಂದರೆ:-

(ಎ) ಲೈಸೆನ್ಸ್ ನೀಡುವುದಕ್ಕಾಗಿ ಶುಲ್ಕ;

(ಬಿ) ನಿರ್ಮಾಣ ಅವಧಿಯಲ್ಲಿ ಸಾರ್ವಜನಿಕ ರಸ್ತೆಗಳ ನಿರ್ವಹಣೆಗಾಗಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣ ಸಾಮಗ್ರಿಗಳ ಸಂಗ್ರಹಣೆಗಾಗಿ ಶುಲ್ಕ, ಎಂದರೆ, ನೆಲ ಬಾಡಿಗೆ;

(ಸಿ) ನಿರ್ಮಾಣವು ಮಂಜೂರಾದ ನಕ್ಷೆಗೆ ಅನುಸಾರವಾಗಿದೆ ಎಂಬುದನ್ನು ಖಚಿತಪಡಿಸಲು ಭದ್ರತಾ ಶುಲ್ಕ;

(ಡಿ) ಪ್ರಾರಂಭ ಪ್ರಮಾಣಪತ್ರಕ್ಕಾಗಿ ಶುಲ್ಕ;

(ಇ) ಪೂರ್ಣಗೊಳಿಸಿದ ಪ್ರಮಾಣಪತ್ರಕ್ಕಾಗಿ ಶುಲ್ಕ; ಮತ್ತು

(ಎಫ್) ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಶುಲ್ಕ.

**(ಬಿ)** ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಇತರ ರೇವಣಿ ಅಥವಾ ಶುಲ್ಕ ಅಥವಾ ಉಪಕರವನ್ನು ವಿಧಿಸುವುದು ಮತ್ತು ವಸೂಲು ಮಾಡುವುದು.

**"240ಬಿ. ಶುಲ್ಕವನ್ನು ವಸೂಲು ಮಾಡುವುದು ಅಥವಾ ವಿಧಿಸುವುದು ಅಥವಾ ನಿರ್ಧರಿಸುವುದರಿಂದ ವಿನಾಯಿತಿಸಲು ಅಥವಾ ಕಡಿಮೆಗೊಳಿಸಲು ರಾಜ್ಯ ಸರ್ಕಾರದ ಅಧಿಕಾರ.-**(1) ರಾಜ್ಯ ಸರ್ಕಾರವು ಅದರ ಅಭಿಪ್ರಾಯದಲ್ಲಿ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಹಾಗೂ ಷರತ್ತುಗಳಿಗೆ ಒಳಪಟ್ಟು ಮತ್ತು ಅಂಥ ಅವಧಿಗಾಗಿ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಮಾಲೀಕತ್ವ ಹೊಂದಿದ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಮಂಡಳಿ ಅಥವಾ ನಿಗಮ ಅಥವಾ ಸಂಸ್ಥೆಗೆ, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬಹುದಾದ ಶುಲ್ಕವನ್ನು ಉತ್ತರಾನ್ವಯವಾಗಿ ಅಥವಾ ಪೂರ್ವಾನ್ವಯವಾಗಿ ವಿನಾಯಿತಿಸುವುದು ಅಥವಾ ಕಡಿಮೆಗೊಳಿಸುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ಅವಶ್ಯಕವಾಗಿದ್ದರೆ, ಅಧಿಸೂಚನೆಯ ಮೂಲಕ ಅದು ಹಾಗೆ ಮಾಡಬಹುದು.

(2) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ಅಧಿಸೂಚನೆಯನ್ನು ರದ್ದುಗೊಳಿಸಬಹುದು ಅಥವಾ ಬದಲಾಯಿಸಬಹುದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಿರ್ಬಂಧವನ್ನು ಅಥವಾ ಷರತ್ತನ್ನು ಒಬ್ಬ ವ್ಯಕ್ತಿಯು ಉಲ್ಲಂಘಿಸಿದಲ್ಲಿ ಅಥವಾ ಪಾಲಿಸದೇ ಇದ್ದಲ್ಲಿ ಅಥವಾ (1)ನೇ ಉಪ-ಪ್ರಕರಣದ ಅಡಿಯಲ್ಲಿ ಒದಗಿಸಬೇಕಾದ ಘೋಷಣೆಯು ತಪ್ಪಾಗಿದೆ ಎಂದು ಕಂಡುಬಂದಲ್ಲಿ, ಆಗ ಅಂಥ ವ್ಯಕ್ತಿಯು, ಹಾಗೂ ಅಂಥ ಉಲ್ಲಂಘನೆಯಾಗಿರುವ ಅಥವಾ ಪಾಲನೆಯಾಗದಿರುವ ಅಥವಾ ತಪ್ಪು ಘೋಷಣೆ ಒದಗಿಸಿರುವುದನ್ನು ಪರಿಗಣಿಸಿದ ಮೇಲೆ, ಅಧಿನಿಯಮವು ಅಥವಾ ಅದರಡಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಸಂದಾಯ ಮಾಡಬಹುದಾದ ಶುಲ್ಕ ಮತ್ತು ಅಧಿಸೂಚನೆ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಸಂದಾಯ ಮಾಡಿದ ಶುಲ್ಕಗಳ ನಡುವಿನ ವ್ಯತ್ಯಾಸದ ಮೊತ್ತದ ಎರಡರಷ್ಟು ಮೊತ್ತಕ್ಕೆ ಸಮನಾದ ಮೊತ್ತವನ್ನು ದಂಡದ ರೂಪದಲ್ಲಿ ಸಂದಾಯ ಮಾಡಲು ಹೊಣೆಗಾರನಾಗತಕ್ಕದ್ದು:

ಪರಂತು, (1)ನೇ ಉಪ-ಪ್ರಕರಣದ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಮೊದಲು, ಆ ವ್ಯಕ್ತಿಗೆ, ಆತನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು.

(4) ಸಂಶಯಗಳ ನಿವಾರಣೆಗಾಗಿ, ಅಧಿನಿಯಮದ ಅಡಿಯಲ್ಲಿ ಕರಗಳನ್ನು ವಿಧಿಸುವುದನ್ನು, ಶುಲ್ಕ ಅಥವಾ ದಂಡದ ನಿರ್ಧರಣೆ ಮತ್ತು ಸಂಗ್ರಹಣೆಯನ್ನು ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧ್ಯಾದೇಶ, 2021ರ ಅಥವಾ ಯಾವುವೇ ನಿಯಮಗಳು, ಅಧಿಸೂಚನೆ, ಆದೇಶ, ಪತ್ರ ಅಥವಾ ಮಾರ್ಗಸೂಚಿಗಳ ಮೂಲಕ ತಿದ್ದುಪಡಿಯಾದಂತೆ, ಯಾವಾಗಲೂ ಕರಗಳನ್ನು ವಿಧಿಸಲಾಗಿದೆ, ವಸೂಲು ಮಾಡಲಾಗಿದೆ ಮತ್ತು ಸಂಗ್ರಹಿಸಲಾಗಿದೆ ಎಂಬುದಾಗಿ ಭಾವಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

**240ಸಿ. ಶುಲ್ಕ ವಿಧಿಸುವಿಕೆ ಮತ್ತು ಸಂಗ್ರಹಣೆಯನ್ನು ಸಿಂಧುಗೊಳಿಸುವುದು.-** 240ಎ ಪ್ರಕರಣದ, 246ನೇ ಪ್ರಕರಣದ ಅಡಿಯಲ್ಲಿ ನೀಡಲಾದ ಅಥವಾ ನೀಡಬೇಕೆಂದು ತಾತ್ಪರ್ಯವಾದ ಕಟ್ಟಡ ನಕ್ಷೆ ಅಥವಾ ಪ್ರಾರಂಭ ಪ್ರಮಾಣಪತ್ರದ ಮಂಜೂರಾತಿಯ ಶುಲ್ಕವಾಗಿ ಅಥವಾ ದಂಡವಾಗಿ ಯಾವುದೇ ಮೊತ್ತದ ವಸೂಲಾತಿಗೆ, ನಿರ್ಧರಣೆಗೆ ಅಥವಾ ಸಂಗ್ರಹಣೆಗೆ ವಿರುದ್ಧವಾಗಿ, ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಹಾಗೂ ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧ್ಯಾದೇಶ, 2021ರ ಪ್ರಾರಂಭಕ್ಕೆ ಮೊದಲು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020ರ (2020ರ ಕರ್ನಾಟಕ ಅಧಿನಿಯಮ ಸಂಖ್ಯೆ 53) ಉಪಬಂಧಗಳ ಅಡಿಯಲ್ಲಿ ನೀಡಿದ ಯಾವುವೇ ನೋಟೀಸುಗಳು ಅಥವಾ ಆದೇಶಗಳನ್ನು ಅಥವಾ ಮಾಡಿದ ನಿರ್ಧರಣೆಯನ್ನು ಅಥವಾ ಹೂಡಿದ ಎಲ್ಲಾ ವ್ಯವಹರಣೆಗಳನ್ನು ಪ್ರಾರಂಭಿಸಿದ ಅಥವಾ ಕೈಗೊಂಡ ಯಾವುದೇ ಕ್ರಮದಲ್ಲಿ ಹಾಗೂ ಅಂಥ ವಸೂಲಾತಿ, ನಿರ್ಧರಣೆ ಅಥವಾ ಸಂಗ್ರಹಣೆಯ ಸಂಬಂಧದಲ್ಲಿ ಶುಲ್ಕ ಅಥವಾ ದಂಡದ ರೂಪದಲ್ಲಿ ಶುಲ್ಕದ ಯಾವುದೇ ವಸೂಲಾತಿಯನ್ನು ಮತ್ತು ಸಂಗ್ರಹಣೆಯನ್ನು ಅಥವಾ ಸಂಗ್ರಹಿಸಬೇಕೆಂದು ಉದ್ದೇಶಿಸಿದ ಮೊತ್ತವನ್ನು ಒಳಗೊಂಡು ಪ್ರಾರಂಭಿಸಿದ ಅಥವಾ ಕೈಗೊಂಡ ಯಾವುದೇ ಕ್ರಮದಲ್ಲಿ ಏನೇ ಇದ್ದರೂ, ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧ್ಯಾದೇಶ, 2021ರ ಮೂಲಕ ತಿದ್ದುಪಡಿಯಾದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020ರ (2020ರ ಕರ್ನಾಟಕ ಅಧಿನಿಯಮ ಸಂಖ್ಯೆ 53) ಅಡಿಯಲ್ಲಿ ಮಾಡಿದ, ತೆಗೆದುಕೊಂಡ ಅಥವಾ ಕೈಗೊಂಡ ಅಂಥ ವಸೂಲಾತಿ, ನಿರ್ಧರಣೆ ಅಥವಾ ಸಂಗ್ರಹಣೆ ಎಂದು, ಆ ಎಲ್ಲಾ ಉದ್ದೇಶಗಳಿಗಾಗಿ ಸಿಂಧುವಾಗಿರತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು ಹಾಗೂ ಸಿಂಧುವಾಗಿದೆ ಮತ್ತು ಪರಿಣಾಮಕಾರಿಯಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ:-

(ಎ) ಸರ್ಕಾರವು ಅಥವಾ ಸಂದರ್ಭಾನುಸಾರವಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು, ಎಲ್ಲಾ ಉದ್ದೇಶಗಳಿಗಾಗಿ ಶುಲ್ಕವಾಗಿ ಯಾವುದೇ ಮೊತ್ತದ ವಸೂಲಾತಿ, ನಿರ್ಧರಣೆ ಅಥವಾ ಸಂಗ್ರಹಣೆ ಸಂಬಂಧದಲ್ಲಿ ಕೈಗೊಂಡ ಎಲ್ಲಾ ಕ್ರಮಗಳು, ವ್ಯವಹರಣೆಗಳು ಅಥವಾ ವಿಷಯಗಳನ್ನು ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು, ಯಾವಾಗಲೂ ಕಾನೂನಿಗನುಸಾರವಾಗಿ ಮಾಡಲಾಗಿದೆ, ಕೈಗೊಳ್ಳಲಾಗಿದೆ ಅಥವಾ ತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

(ಬಿ) ಅಂಥ ಯಾವುದೇ ಶುಲ್ಕದ ಮರುಸಂದಾಯಕ್ಕಾಗಿ ಯಾವುದೇ ನ್ಯಾಯಾಲಯದಲ್ಲಿ ಅಥವಾ ನ್ಯಾಯಾಧಿಕರಣದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು, ಹೂಡತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ; ಮತ್ತು

(ಸಿ) ಯಾವುದೇ ನ್ಯಾಯಾಲಯವು, ಯಾವುದೇ ಅಂಥ ಶುಲ್ಕದ ಮರುಸಂದಾಯವನ್ನು ನಿರ್ದೇಶಿಸಿ ಯಾವುದೇ ಡಿಕ್ರಿಯನ್ನು ಅಥವಾ ಆದೇಶವನ್ನು ಜಾರಿಗೊಳಿಸತಕ್ಕದಲ್ಲ."

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



The above translation of the Karnataka Municipal Corporations and Certain Other Law (Amendment) Ordinance, 2021 (Karnataka Ordinance 08 of 2021) shall be authoritative text in Kannada language under section 5-A of the Karnataka Official Language Act, 1963 (Karnataka Act 26 of 1963).

**ಥಾವರ್ ಚಂದ್ ಗೆಹ್ಲೋಟ್**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

VIJAY N M
Digitally signed by VIJAY N M
Date: 2021.11.16 16:12:47 +05'30'